ಜೂನ್ 2003	3,14,676–00
ಜುಲೈ 2003	3,26,609–00
ಆಗಸ್ಟ್ 2003	2,90,355–00
ಸೆಪ್ಟೆಂಬರ್ 2003	2,20,918–00
ಅಕ್ಟೋಬರ್ 2003	3,41,835–00
ನವೆಂಬರ್ 2003	3,24,369–00
ಡಿಸೆಂಬರ್ 2003	2,80,481–00
ಜನವರಿ 2004	3,33,452–00
ಫೆಬ್ರವರಿ 2004	3,46,694–00
ಮಾರ್ಚ್ 2004	3,39,643–00
ಒಟ್ಟು	**38,15,151–00**
II. ಗೋಲಕದಿಂದ	12,06,126–00
III. ಬ್ಯಾಂಕಿನ ಬಡ್ಡಿ	14,15,000–00

875(1327) ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀರಂಗಪಟ್ಟಣದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು ಕಳೆದ 10 ವರ್ಷಗಳಿಂದ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು 2004–05ನೇ ಸಾಲಿನಲ್ಲಿಯೇ ಮೂರನೇ ಒಂದು ಭಾಗ ಅನುದಾನ ಒದಗಿಸಿ ಮಂಜೂರಾತಿ ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಈ ಬಗ್ಗೆ ಅಗತ್ಯ ಸಂಪನ್ಮೂಲಗಳ ವ್ಯವಸ್ಥೆ ಮಾಡುವ ಕುರಿತು ಸರ್ಕಾರವು ಕ್ರಮ ಜರುಗಿಸುತ್ತಿದೆ. ಸಂಪನ್ಮೂಲಗಳ ವ್ಯವಸ್ಥೆ ಆಗುತ್ತಲೇ ಮಿನಿ ವಿಧಾನ ಸೌಧ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

876(1156) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಇಲ್ಲಿಯವರೆಗೆ ಕಾಡಾನೆಗಳಿಂದ ಆಗಿರುವ ಮಾನವ, ಸಾಕು ಪ್ರಾಣಿಗಳ ಪ್ರಾಣಹಾನಿಹಾಗೂ ಬೆಳೆ ಹಾನಿಗಳ ಪ್ರಮಾಣವೆಷ್ಟು;

ಆ) ಆನೆಗಳನ್ನು ಸ್ಥಳಾಂತರಿಸುವ ಕಾರ್ಯ ಎಂದಾದರು ನಡೆದಿದೆಯೇ;

ಇ) ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಶಾಶ್ವತ ಪರಿಹಾರ ಕ್ರಮಗಳೇನು;

ಈ) ಬೆಳೆ ನಷ್ಟಕ್ಕೆ ಹಾಗೂ ಇತರೆ ತೆಂಗು, ಬಾಳೆ, ಅಡಿಕೆ ಮರಗಳ ಮತ್ತು ಕಾಫಿ, ಏಲಕ್ಕಿ ಇತರೆ ಗಿಡಗಳ ನಷ್ಟಕ್ಕೆ ಪರಿಹಾರ ಕೊಡಲು ಇರುವ ಮಾನದಂಡಗಳೇನು; ಅವು ವೈಜ್ಞಾನಿಕವಾಗಿದೆಯೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 2001–02ನೇ ಸಾಲಿನಿಂದ ಈವರೆವಿಗೂ ಆಲೂರು, ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆಗಳಿಂದ ಆಗಿರುವ ಬೆಳೆಹಾನಿ, ಜೀವಹಾನಿ ಹಾಗೂ ಮಾನವಗಾಯ ಪ್ರಕರಣಗಳ ವಿವರ ಕೆಳಕಂಡಂತಿದೆ.

ವರ್ಷ	ಪಸಲು ಹಾನಿ ಪ್ರಕರಣ/ ನೀಡಲಾದ ಪರಿಹಾರ	ಮಾನವ ಹತ್ಯೆ ಪ್ರಕರಣ/ ನೀಡಲಾದ ಪರಿಹಾರ	ಮಾನವ ಗಾಯ ಪ್ರಕರಣ/ ನೀಡಲಾದ ಪರಿಹಾರ	ಜಾನುವಾರು ಹತ್ಯೆ ಪ್ರಕರಣ/ ನೀಡಲಾದ ಪರಿಹಾರ	ಒಟ್ಟು ಪ್ರಕರಣ/ ನೀಡಲಾದ ಪರಿಹಾರ
2001–02	92 ರೂ.55,820	1 ರೂ.1,00,000	–	–	93] ರೂ.1,55,820
2002–03	199 ರೂ.1,81,325	–	1 ರೂ.5,867	–	200 ರೂ.1,87,192
2003–04	349 ರೂ.4,09,300	1 ರೂ.1,00,000	3 ರೂ.11,500	–	353 ರೂ.5,20,800
2004–05 (12/04)	376 ರೂ.4,89,950	2 ರೂ.2,00,000	1 ರೂ.15,000	–	379 ರೂ.7,03,950

2004–05ನೇ ಸಾಲಿನಲ್ಲಿ ಮೇಲೆ ತಿಳಿಸಿರುವ ಪ್ರಕರಣಗಳಿಗೆ ಈಗಾಗಲೇ ಪರಿಹಾರ ಪಾವತಿ ಮಾಡಿದ್ದು ಅನುದಾನ ಕೋರಿ ಮೇಲಾಧಿಕಾರಿಗಳಿಗೆ ಸಲ್ಲಿಸಿರುವ 236 ಪ್ರಕರಣಗಳ ರೂ. 4,01,675/– ಗಳಲ್ಲಿ ರೂ. 2,97,800/– ಗಳ ಅನುದಾನ ಬಂದಿದ್ದು, ಆಲೂರು, ಯಸಳೂರು, ಸಕಲೇಶಪುರ ವಲಯಗಳ 170 ಪ್ರಕರಣಗಳಿಗೆ ಸದರಿ ರೂ. 2,97,800/– ಗಳನ್ನು ಖಜಾನೆಯ ಮೂಲಕ ಡ್ರಾ ಮಾಡಿ ಪಾವತಿಸಲು ಹಂಚಿಕೆ ಮಾಡಿದೆ. ಪ್ರಸ್ತುತ ಪರಿಹಾರ ಮಂಜೂರಾತಿ ಕೋರಿ ಈ ಕಛೇರಿಗೆ 200 ಪ್ರಕರಣಗಳು ಬಂದಿದ್ದು ಸದರಿ ಪ್ರಕರಣಗಳಿಗೆ ಪರಿಹಾರ ಮಂಜೂರು ಮಾಡಿ ಅನುದಾನ ಕೋರಿಕೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ನಡೆದಿದೆ.

ಆಲೂರು ವಲಯದ ದೊಡಬೆಟ್ಟ ರಕ್ಷಿತ ಅರಣ್ಯದಲ್ಲಿ ಬೀಡುಬಿಟ್ಟಿದ್ದ ಕಾಡಾನೆಗಳನ್ನು ಹಿಡಿಯಲು ಸಾಕಿದ ಆನೆಗಳನ್ನು ಉಪಯೋಗಿಸಿಕೊಂಡು ನುರಿತ ತಜ್ಞರಿಂದ ಮತ್ತು ಬರುವ ಚುಚ್ಚುಮದ್ದನ್ನು ಬಂದೂಕುಗಳಿಂದ ಹಾರಿಸಿ ಮತ್ತು ಬರಿಸಿ, 12 ಕಾಡಾನೆಗಳನ್ನು ಹಿಡಿದಿದ್ದು ಅವುಗಳಲ್ಲಿ 1 ಕಾಡನೆ ಮೃತಪಟ್ಟು ಉಳಿದ 11 ಕಾಡಾನೆಗಳನ್ನು ನಾಗರಹೊಳೆ ಅಭಯಾರಣ್ಯಕ್ಕೆ ಸಾಗಿಸಲಾಗಿರುತ್ತದೆ.

ಇ) ಹಾಸನ ವೃತ್ತದ ಹಾಸನ ವಿಭಾಗದಲ್ಲಿ ಆನೆಗಳ ಹಾವಳಿಯನ್ನು ತಡೆಗಟ್ಟಲು ಇಲಾಖಾ ಸಿಬ್ಬಂದಿಯವರು ಇಲಾಖಾ ವಾಹನ ಉಪಯೋಗಿಸಿಕೊಂಡು ಸುತ್ತಮುತ್ತಲ ಗ್ರಾಮಸ್ಥರ ಸಹಕಾರದೊಂದಿಗೆ ಸಿಡಿಮದ್ದು ಸಿಡಿಸಿ, ಬಂದೂಕುಗಳು ಹಾಗು ನಿಸ್ತಂತು ಉಪಕರಣಗಳನ್ನು

ಉಪಯೋಗಿಸಿಕೊಂಡು ಮತ್ತು ಆನೆಗಳನ್ನು ಓಡಿಸುವ ತಂಡಗಳ ಕ್ಯಾಂಪ್ ರಚಿಸಿ ತಾತ್ಕಾಲಿಕವಾಗಿ ಅರಣ್ಯ ಪ್ರದೇಶಕ್ಕೆ ಓಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಲೂರು ಹಾಗೂ ಸಕಲೇಶಪುರ ತಾಲ್ಲೂಕುಗಳಲ್ಲಿನ ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಹಾಗೂ ಆನೆಗಳನ್ನು ಹಿಡಿದು ಬೇರೆ ಕಡೆಗೆ ಸ್ಥಳಾಂತರಿಸಲು ವನ್ಯಜೀವಿ ಸಂರಕ್ಷಣೆ ಕಾಯಿದೆ ಸೆಕ್ಷನ್–12ರ ಪ್ರಕಾರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಈ ಬಗ್ಗೆ ರಾಜ್ಯ ಸರ್ಕಾರವು ಅನುಮತಿ ಪಡೆಯಲು ಕೇಂದ್ರ ಸರ್ಕಾರವನ್ನು ಕೋರಿದ್ದು, ಕೇಂದ್ರ ಸರ್ಕಾರದಿಂದ ಅನುಮತಿ ದೊರೆತನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಸರ್ಕಾರದ ಆದೇಶ ಸಂಖ್ಯೆ: ಅಪಜೀ 22 ಎಫ್‌ಡಬ್ಲ್ಯೂಎಲ್ 96, ದಿನಾಂಕ: 12–2–2002 ರಲ್ಲಿ ಬೆಳೆನಷ್ಟಕ್ಕೆ ಹಾಗೂ ಇತರೆ ತೆಂಗು, ಬಾಳೆ, ಅಡಿಕೆ ಮತ್ತು ಕಾಫಿ, ಏಲಕ್ಕಿ ಇತರೆ ಗಿಡಗಳ ನಷ್ಟಕ್ಕೆ ನಿಗದಿ ಪಡಿಸಲಾಗಿರುವ ದರಗಳ ಪ್ರಕಾರ ಪರಿಹಾರವನ್ನು ಮಂಜೂರು ಮಾಡಲಾಗುತ್ತಿದೆ.

878(1323) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಎಷ್ಟು ಜಲ ವಿದ್ಯುತ್ ಯೋಜನೆಗಳಿಗೆ ಮಂಜೂರಾತಿ ದೊರಕಿದೆ.

ಆ) ಅನುಷ್ಠಾನಗೊಂಡಿರುವ ಯೋಜನೆಗಳೆಷ್ಟು..

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಒಟ್ಟು 9 ಕಿರುಜಲ ವಿದ್ಯುತ್ ಯೋಜನೆಗಳನ್ನು ಹಂಚಿಕೆ ಮಾಡಲಾಗಿದೆ.

ಆ) 18 ಮೆ.ವ್ಯಾ. ಸಾಮರ್ಥ್ಯದ ಒಂದು ಕಿರುಜಲ ವಿದ್ಯುತ್ ಯೋಜನೆಯು ಅನುಷ್ಠಾನಗೊಂಡಿದೆ.

879(1324) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಜಲಾಶಯದ ನಿರ್ಮಾಣವಾಗಿ ಎಷ್ಟು ವರ್ಷಗಳಾಗಿವೆ?

ಆ) ಈ ಜಲಾಶಯದ ಹಿನ್ನೀರಿನಿಂದ ಶೀತ ಪೀಡಿತವಾದ ಗ್ರಾಮಗಳೆಷ್ಟು?

ಇ) ಅವುಗಳ ಪುನರ್ವಸತಿ ಮತ್ತು ಸಂತ್ರಸ್ಥರ ಪರಿಹಾರ ಕಾರ್ಯ ಯಾವ ಹಂತದಲ್ಲಿದೆ.

ಈ) ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 23 ವರ್ಷಗಳಾಗಿವೆ.

ಆ) ಈ ಜಲಾಶಯದ ಹಿನ್ನೀರಿನಿಂದ ಯಾವುದೇ ಗ್ರಾಮಗಳು ಶೀತ ಪೀಡಿತವಾಗಿರುವುದಿಲ್ಲವೆಂದು ಮುಖ್ಯ ಅಭಿಯಂತರರು, ಹೇಮಾವತಿ ಜಲಾಶಯ ಯೋಜನೆ, ಗೊರೂರುರವರು ತಿಳಿಸಿರುತ್ತಾರೆ.